೨. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ: ಹಿರೆಕೆರೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ ಬಸವೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಗದಿರುವ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಹಿರೆಕೆರೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ ಬಸವೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ಇದನ್ನು ಮೂರು ವರ್ಷಗಳಿಂದಲೂ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ, ಆದರೆ ಇದು ಇನ್ನು ಆರಂಭವಾಗಲಿಲ್ಲ. ಇದನ್ನು ಪ್ರಾರಂಭ ಮಾಡುವುದಕ್ಕಾಗಿ ಅವರು ಷೇರು ಹಣವನ್ನು ರೈತರಿಂದ ಹೇಗೆ ಕಲೆಕ್ಟ್ ಮಾಡುತ್ತಿದ್ದಾರೆಂದರೆ, ಬೇರೆ ಬೇರೆ ಸಹಕಾರಿ ಸಂಘಗಳಲ್ಲಿ ರೈತರಿಗೆ ಸಾಲವನ್ನು ಕೊಡಿಸಿ ಆ ಮೂಲಕ ಷೇರು ಹಣವನ್ನು ಸಂಗ್ರಹಣೆ ಮಾಡುತ್ತಿದ್ದಾರೆ. ಕಳೆದ ೩ ವರ್ಷಗಳಲ್ಲಿ ೧೩,೨೭೩ ರ ಜನರ ಪೈಕಿ ಪ್ರತಿಯೊಬ್ಬರಿಂದ ೧೦,೦೦೦ ರೂಪಾಯಿಗಳಂತೆ ಹಣವನ್ನು ಸಂಗ್ರಹಣೆ ಮಾಡಿದ್ದಾರೆ. ಈ ಬಾಬ್ತಿನಲ್ಲಿ ಒಟ್ಟು ೪.೪೯ ಲಕ್ಷ ರೂಪಾಯಿಗಳನ್ನು ಸಂಗ್ರಹಣೆ ಮಾಡಿದ್ದಾರೆ, ಅದರಲ್ಲಿ ಕಾರ್ಖಾನೆಯ ಸದಸ್ಯರನ್ನಾಗಿ ೮,೧೯೩ ಜನರನ್ನು ಮಾತ್ರ ಮಾಡಿದ್ದಾರೆ. ಇನ್ನು ೫,೦೮೫ ಜನ ರೈತರುಗಳು ಆ ಸಂಘಕ್ಕೆ ಸದಸ್ಯರಾಗಿಲ್ಲ. ಅವರಿಂದ ಸಂಗ್ರಹವಾದ ಹಣ ೨.೭೪ ಲಕ್ಷ ರೂಪಾಯಿಗಳು ಅಮಾನತ್ ಅಕೌಂಟಿನಲ್ಲಿ ಇವತ್ತು ಇದೆ, ಅವರ ಷೇರು ಬಂಡವಾಳವನ್ನು ಸಂಗ್ರಹಣೆ ಮಾಡಿ ಅವರನ್ನು ಸದಸ್ಯರನ್ನಾಗಿ ಮಾಡಿಲ್ಲ ಸಾಲ ಪಡೆದುಕೊಂಡ ಸಹಕಾರ ಸಂಘಗಳಲ್ಲಿ ಬಡ್ಡಿ ಏರುತ್ತಾ ಹೋಗುತ್ತಿದೆ. ಅವರಿಂದ ಸಾಲ ವಸೂಲಾತಿಯ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿದ್ದಾರೆ. ಹೀಗಾಗಿ ಆ ರೈತರು ಹಿರೆಕೆರೂರಿನಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ಆ ರೈತರು ನಾವು ಹಾಕಿದಂತಹ ಷೇರು ಬಂಡವಾಳವನ್ನು ವಾಪಸ್ಸು ಕೊಡಿ ಎಂದು ಒತ್ತಾಯಿಸುತ್ತಿದ್ದಾರೆ. ೧೨ನೇ ತಾರೀಖಿನಿಂದ ಮಾಜಿ ಸಭಾಧ್ಯಕ್ಷರಾದ ಶ್ರೀ ಬಿ.ಜಿ.ಬಣಕಾರ್‌ರವರ ನೇತೃತ್ವದಲ್ಲಿ ಹಾಗೂ ಮಾಜಿ ಶಾಸಕರಾದ ಮಾನ್ಯ ಶ್ರೀ ಯು.ಬಿ.ಬಣಕಾರ್‌ರವರ ನೇತೃತ್ವದಲ್ಲಿ ರೈತರು ಸತ್ಯಾಗ್ರಹ ಮಾಡುತ್ತಿದ್ದಾರೆ. ಸಹಕಾರ ಅಥವಾ ಸಕ್ಕರೆ ಇಲಾಖೆ ಇರಬಹುದು, ಈಗಾಗಲೇ, ಸದಸ್ಯರಾಗಲು ಯಾರಿಗೂ ಆಸಕ್ತಿ ಇಲ್ಲ. ಅವರ ಹಣವನ್ನು ವಾಪಸ್ ಕೊಡಬೇಕೆಂದು ಅದೀಪ್ ಚೌಧರಿಯವರು ನಿರ್ದೇಶನವನ್ನು ಕೊಟ್ಟಿದ್ದಾರೆ. ಆ ನಿರ್ದೇಶನದ ಪ್ರಕಾರ ಇದುವರೆಗೆ ಅಲ್ಲಿ ಇಲಾಖೆಯವರು ನಡೆದುಕೊಳ್ಳುತ್ತಿಲ್ಲ. ಆದುದರಿಂದ ರೈತರು ಏನು ಹಣವನ್ನು ತೊಡಗಿಸಿದ್ದಾರೆ ಅದನ್ನು ತಕ್ಷಣ ವಾಪಸ್ ಕೊಡಲು ನಿರ್ದೇಶನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ,

ಮಾನ್ಯ ವಿರೋಧಪಕ್ಷದ ನಾಯಕರು ಈಗತಾನೆ ಆ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಮಾನ್ಯ ಸಹಕಾರ ಸಚಿವರು ಬೇರೆ ಕೆಲಸದ ಕಾರಣ ಈಗ ಸದನಕ್ಕೆ ಬಂದಿಲ್ಲ. ಈ ವಿಚಾರದ ಬಗ್ಗೆ ಎರಡು ಮೂರು ದಿವಸಗಳಲ್ಲಿ ನಾನೇ ಅಧಿಕಾರಿಗಳೊಡನೆ ಚರ್ಚೆ ಮಾಡಿ ತಮ್ಮ ಕಡೆಗೆ ಬಂದು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಮುಕ್ತವಾಗಿ ತಿಳಿಸುತ್ತೇನೆ.

ಆ) ವಿಷಯ: ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಮೈಸೂರಿನ ಕಾಲೇಜಿನಲ್ಲಿ ಮಾತನಾಡುವಾಗ ಲೀಗಲ್ ಪ್ರೊಫೆಷನ್ ಹಾಗೂ ನ್ಯಾಯಾಧೀಶರ ಬಗ್ಗೆ ಕೆಲವು ಅಪಮಾನಕರ ಹೇಳಿಕೆ ನೀಡಿರುವುದು.

+ ಶ್ರೀ.ಕೆ.ಎನ್.ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀ ವಿಶ್ವನಾಥ್‌ರವರು ಮೈಸೂರಿನ ಲಾ ಕಾಲೇಜಿನಲ್ಲಿ ಮಾತನಾಡುವಾಗ ಲೀಗಲ್ ಪ್ರೊಫೆಶನ್ ಹಾಗೂ ನ್ಯಾಯಾಧೀಶರ ಬಗ್ಗೆ ಕೆಲವು ವಿಷಯಗಳನ್ನು ಹೇಳಿರುವುದು ಬಹಳ ಅವಮಾನಕರವಾದ ಸಂಗತಿಯಾಗಿದೆ. ಬಹುಶಃ ವಿಶ್ವನಾಥ್‌ರವರು ಅನೇಕ ವಿವಾದಗಳಲ್ಲಿ ಸಿಕ್ಕಿದ್ದಾರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿರುವ ಡೊನೇಷನ್ ಹಾವಳಿಯನ್ನು ತಡೆಯಲು ಕ್ರಮ ತೆಗೆದುಕೊಳ್ಳಬೇಕು. ಮಾಜಿ ಮಂತ್ರಿಗಳಾಗಿದ್ದ ಗೋವಿಂದೇಗೌಡರು ಅನೇಕ ಖಾಸಗಿ ಶಾಲೆಗಳಿಗೆ ಭೇಟಿ ನೀಡಿದ್ದರು, ನಾನು ಅನೇಕ ಸಾರಿ ವಿಶ್ವನಾಥ್‌ನವರನ್ನು ಭೇಟಿ ಮಾಡಿ ನಮ್ಮ ಕ್ಷೇತ್ರದಲ್ಲಿ ಅನೇಕ ಖಾಸಗಿ ಶಾಲೆಗಳಿವೆ ಭೇಟಿ ನೀಡಿ ಎಂದು ಆಹ್ವಾನಿಸಿದ್ದೆ, ಅವರು ಬರುತ್ತೇನೆಂದು ಹೇಳುತ್ತಾರೆ, ಬರುತ್ತಿಲ್ಲ, ಮಾನ್ಯ ಸಚಿವರು ವಕೀಲರು ಆರ್ಗ್ಯುಮೆಂಟ್ ಮಾಡುವ ವಿಚಾರದಲ್ಲಿ ಅನೇಕ ಪುಸ್ತಕಗಳನ್ನು ತೋರಿಸುತ್ತಾರೆ, ಇಷ್ಟು ಫೀ ಆಗುತ್ತದೆನ್ನುವುದು, ಹೈಕೋರ್ಟ್ ಎದುರಿಗೆ ಎಲ್ಲಿ ವಕೀಲರು ಓಡಾಡುತ್ತಾರೊ ಅಲ್ಲಿ ಹುಲ್ಲು ಕೂಡ ಬೆಳೆಯುವುದಿಲ್ಲವೆನ್ನುವ ಮಾತುಗಳನ್ನಾಡಿದ್ದಾರೆ, ಅವರು ಕೂಡ ವಕೀಲರಾಗಿದ್ದವರು, ಇದು ಅವಮಾನಕರವಾದ ಸಂಗತಿ. ಲೀಗಲ್, ಮೆಡಿಕಲ್ ಯಾವುದೇ ವೃತ್ತಿ ಇರಲಿ, ಹಾಗಾದರೆ ಎಲ್ಲಾ ರಾಜಕೀಯದವರನ್ನು ಕೂಡ ಬೈಯಬಹುದಲ್ಲ ರಾಜಕೀಯ ಕೂಡ ಒಂದು ವೃತ್ತಿಯೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಯಾರಾದರೂ ರಾಜಕೀಯವನ್ನು ಒಂದು ವೃತ್ತಿಯೆಂದು ತಿಳಿದುಕೊಂಡಿದ್ದರೆ, ಇದು ವೃತ್ತಿಯಲ್ಲವೆಂದು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ: ತಾವು ಕೂಡ ವಕೀಲರಾಗಿದ್ದವರು, ಬಹುಶಃ ವಕೀಲ ವೃತ್ತಿಯಲ್ಲಿ ತಾವು ಫ್ಲಾಸ್ಪರಸ್ ಆಗಲಿಲ್ಲವೇನೊ, ವಕೀಲ ವೃತ್ತಿಯಲ್ಲಿ